# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1ಜಿ)/ಪಿಆರ್/163/21–22

E-Office: 16120

ಮುಖ್ಯ ಆಯುಕ್ತರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು. ದಿನಾಂಕ: 25/2/2022

**ಕಛೇರಿ ಆದೇಶ**

ವಿಷಯ:ಶ್ರೀಮತಿ ಕೆ.ತಾರಾಬಾಯಿ, ದ್ವಿ.ದ.ಸ, ಇವರಿಗೆ 2 ವರ್ಷಗಳ ಅರ್ಹದಾಯಕ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ:ಬಿ12(4)ಪಿಆರ್/154/00-01, ದಿ:04-08-2003
2) ಮುಖ್ಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್) ರವರ ವರದಿ ದಿ:29-11-2021.
3)ಉಪ ನಿಯಂತ್ರಕರು (ಹಣಕಾಸು) ರವರ ವರದಿ ದಿನಾಂಕ: 25-01-2022.
4)ಸರ್ಕಾರಿ ಸುತ್ತೋಲೆ ಸಂ:ಎಫ್.ಡಿ. 02(ಇ ) ಎಸ್.ಆರ್.ಎ.2020,ದಿ:17-08-2020.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಕೆ.ತಾರಾಬಾಯಿ, ದ್ವಿತೀಯ ದರ್ಜೆ ಸಹಾಯಕರು, ಆರೋಗ್ಯಧಿಕಾರಿಗಳು (ದಕ್ಷಿಣ-ಕ್ಲಿನಿಕಲ್) ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರ ಜನ್ಮ ದಿನಾಂಕ: 29-03-1967 ಆಗಿದ್ದು, ಸದರಿ ನೌಕರರು ಪಾಲಿಕೆಯ ಸೇವೆಗೆ ಉಲ್ಲೇಖ(1)ರ ಕಛೇರಿ ಆದೇಶದಲ್ಲಿ ಭಾರತೀಯ ಜನಸಂಖ್ಯಾ ಯೋಜನೆ-8, ಇಲ್ಲಿಂದ ದಿನಾಂಕ:13-12-2002 ರಿಂದ ಅನ್ವಯಿಸುವಂತೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವಿಲೀನಗೊಂಡಿರುತ್ತಾರೆ. ಸದರಿ ನೌಕರರು ಬಿಬಿಎಂಪಿಯ ಸೇವೆಗೆ ಸೇರುವ ಸಂದರ್ಭದಲ್ಲಿ 35 ವರ್ಷ 09 ತಿಂಗಳು 16 ದಿನಗಳಾಗಿರುತ್ತದೆ. ಆದ್ದರಿಂದ ಉಲ್ಲೇಖ-(2)ರ ವರದಿಯನ್ವಯ, ಉಲ್ಲೇಖ-(3)ರ ಉಪ ನಿಯಂತ್ರಕರು(ಹಣಕಾಸು) ರವರ ಅಭಿಪ್ರಾಯ ವರದಿಯಂತೆ ಹಾಗೂ ಉಲ್ಲೇಖ-(4)ರ ಸರ್ಕಾರಿ ಆದೇಶದನ್ವಯ ಸದರಿ ನೌಕರರಿಗೆ 1958ರ ಕೆ.ಸಿ.ಎಸ್.ಆರ್. ನಿಯಮ 247(ಎ) ರನ್ವಯ ಗರಿಷ್ಠ 2 ವರ್ಷಗಳ ಅರ್ಹದಾಯಕ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕಾಗಿ ಮಾತ್ರ ಪರಿಗಣಿಸಲು ಅನುಮತಿ ನೀಡಲಾಗಿದೆ.

ಮೇಲ್ಕಂಡ ಆದೇಶದಂತೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಯವರು ಸೂಕ್ತ ಕ್ರಮ ಕೈಗೊಳ್ಳುವುದು.

ವಿಶೇಷ ಆಯುಕ್ತರು (ಆಡಳಿತ) ರವರ ಆದೇಶದಂತೆ

25/2/22
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
24/2/2022 24-2-22

**ಪ್ರತಿಯನ್ನು:**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಅಪರ ಆಯುಕ್ತರು (ಹಣಕಾಸು) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಆರೋಗ್ಯಧಿಕಾರಿಗಳು (ದಕ್ಷಿಣ-ಕ್ಲಿನಿಕಲ್) ರವರಿಗೆ ಮಾಹಿತಿಗೆ ಹಾಗೂ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಮುಖ್ಯ ಆರೋಗ್ಯಧಿಕಾರಿಗಳು (ಕ್ಲಿನಿಕಲ್) ರವರಿಗೆ ಮಾಹಿತಿಗೆ ಹಾಗೂ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಮು.ಲೆ.ಅ/ಮು.ಲೆ.ಪ/ಸ.ನಿ (ಹಣಕಾಸು- ಕೇಂದ್ರ) ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಮಾಹಿತಿಗೆ ಕಳುಹಿಸಿದೆ.
: ಸದರಿ ನೌಕರರಿಗೆ / ಕಛೇರಿ ಪ್ರತಿ.

Office of the IT Advisor
286
8/3/22

I.P.P.